ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1

---

**ಎಡಿಎಂ.2.ಆರ್.ಟಿ.ಇ.ನೆಹೊಶಾ:2/2012–13** **ದಿನಾಂಕ: 7–5–2012**

ಉಪನಿರ್ದೇಶಕರು,
(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಜಿಲ್ಲೆ.

ಮಾನ್ಯರೆ,

**ವಿಷಯ: ಶಿಕ್ಷಣ ಹಕ್ಕು ಅಧಿನಿಯಮದ ಪ್ರಕಾರ 2012–13ನೇ ಸಾಲಿಗೆ 1ನೇ ತರಗತಿ ಮಕ್ಕಳನ್ನು ದಾಖಲು ಮಾಡಿಕೊಳ್ಳಲು ಪೂರ್ವ ಸಿದ್ಧತೆ ಕುರಿತಂತೆ.**

ಉಲ್ಲೇಖ: ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿನಾಂಕ: 3–5–2012.

---

ದಿನಾಂಕ 3–5–2012 ರಂದು ನೆರೆಹೊರೆಯ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಪಟ್ಟಿಯನ್ನು (ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ) ನಮೂನೆ 1 ರಿಂದ 4 ರಲ್ಲಿ ಪ್ರಕಟಿಸಲು ಈಗಾಗಲೇ ಸೂಚನೆ ನೀಡಲಾಗಿದೆ. ಅದರಂತೆ ಪ್ರಕಟಿಸಿರುವುದಾಗಿ ಭಾವಿಸಲಾಗಿದೆ.

ಮುಂದುವರೆದು, ಅನುದಾನರಹಿತ ಶಾಲೆಗಳಲ್ಲಿ (ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ) ಶೇಕಡ 25ರ ಪ್ರಮಾಣದಲ್ಲಿ 1ನೇ ತರಗತಿಗೆ ದಾಖಲು ಮಾಡಿಕೊಳ್ಳಬೇಕಾದ ಮಕ್ಕಳ ಸಂಖ್ಯೆಯನ್ನು ನಿಗದಿಪಡಿಸಿ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆ–5 ರಲ್ಲಿ ಬಿ.ಇ.ಓ ರವರು ತಮ್ಮ ತಮ್ಮ ತಾಲೂಕಿನಲ್ಲಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲು ಮಾಹಿತಿಯನ್ನು ಸಿದ್ದಪಡಿಸಿಕೊಳ್ಳಲು ತಿಳಿಸಿದೆ. ಈ ಕೆಳಗೆ ಸೂಚಿಸಿರುವ ವೇಳಾಪಟ್ಟಿಯನ್ವಯ ಎಲ್ಲಾ ಬಿ.ಇ.ಓ ರವರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಕ್ರಮತೆಗೆದುಕೊಳ್ಳಲು ಸೂಚಿಸಿದೆ.

**<u>2012–13ನೇ ಸಾಲಿಗೆ ಮಕ್ಕಳ ದಾಖಲಾತಿಗೆ ನಿಗದಿಪಡಿಸಿರುವ ಪರಿಷ್ಕೃತ ವೇಳಾಪಟ್ಟಿ:</u>**

| ಕ್ರ. ಸಂ | ನಿರ್ವಹಿಸಬೇಕಾದ ಕಾರ್ಯ | ದಿನಾಂಕ |
|---|---|---|
| 1 | 25 % ಪ್ರಮಾಣದಲ್ಲಿ ದಾಖಲು ಮಾಡಿಕ್ಕೊಳಬೇಕಾದ ಮಕ್ಕಳ ಸಂಖ್ಯೆಯನ್ನು ಅಧಿಸೂಚಿಸುವುದು | 10–05–2012 |
| 2 | ಪ್ರವೇಶ ಪಡೆಯಲು ಅರ್ಜಿದಾರರು ಶಾಲೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 25–05–2012 |
| 3 | ಪ್ರತಿ ಶಾಲೆಯಲ್ಲಿ ಮಕ್ಕಳನ್ನು ಆಯ್ಕೆ ಮಾಡಬೇಕಾದ ಅವಧಿ | 30–05–2012 ರಿಂದ 05–06–2012 ರವರೆಗೆ |
| 4 | ದಾಖಲಾತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುಮೂದಿಸಲು ಕೊನೆಯ ದಿನಾಂಕ | 10–06–2012 |

ತಮ್ಮ ನಂಬುಗೆಯ,

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

## ನಮೂನೆ-5

**ಸಾರ್ವಜನಿಕರ ಮಾಹಿತಿಗಾಗಿ_ಅನುದಾನರಹಿತ ಶಾಲೆಗಳಲ್ಲಿ ಶೇಕಡ 25 ರ ಪ್ರಮಾಣದಲ್ಲಿ 1ನೇ ತರಗತಿಗೆ ದಾಖಲು ಮಾಡಿಕೊಳ್ಳಬೇಕಾದ ಮಕ್ಕಳ ಮಾಹಿತಿ**

(ಅನುದಾನರಹಿತ ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ)

ತಾಲ್ಲೂಕು:

| ಕ್ರ.ಸಂ. | ಶಾಲೆಯ ಹೆಸರು ಮತ್ತು ನಿರ್ದಿಷ್ಟ ಸ್ಥಳ | ಶೇಕಡ 25ರ ಪ್ರಮಾಣದಲ್ಲಿ 1ನೇ ತರಗತಿಗೆ ದಾಖಲು ಮಾಡಿಕೊಳ್ಳಲು ಮೀಸಲಿಡಲಾದ ಮಕ್ಕಳ ಸಂಖ್ಯೆ (ಅನುದಾನರಹಿತ ಅಲ್ಪಸಂಖ್ಯಾತ ಶಾಲೆಗಳನ್ನು ಹೊರತುಪಡಿಸಿ) | ಬೋಧನಾ ಮಾಧ್ಯಮ |
|---|---|---|---|
| 1 | 2 | 3 | 4 |
| | | | |

ಕ್ಷೇತ್ರ ಶಿಕ್ಷಣಾಧಿಕಾರಿ